# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ-3:ಎ3:ಸಂ.ನ:ಆನ್‌ಲೈನ್:2020-21

ಜ್ಞಾನಭಾರತಿ,
ಬೆಂಗಳೂರು-560 056.
***ದಿನಾಂಕ: 14-07-2020***

**-:ಸುತ್ತೋಲೆ:-**

**ವಿಷಯ:2020-21ನೇ** ಸಾಲಿನ ಸಂಯೋಜನಾ ವಿವರಗಳನ್ನು ಅಪ್ ಲೋಡ್ ಮಾಡುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದಆದೇಶ ಸಂಖ್ಯೆ: ಇಡಿ 34 ಇಜಿಒವಿ 2020 (ಭಾಗ-2) ದಿನಾಂಕ: 22-06-2020
2. ವಿ.ವಿ. ಅಧಿಸೂಚನೆ ಸಂಖ್ಯೆ:No.Aca-III/ REN/2020-21 ದಿನಾಂಕ: 16-09-2019.
3. ಕುಲಪತಿಯವರ ಅನುಮೋದನೆ ದಿನಾಂಕ:13-07-2020.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಕರ್ನಾಟಕ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ 2019-20ನೇ ಸಾಲಿನಲ್ಲಿ ಸಂಯೋಜನಾ ಪ್ರಕ್ರಿಯೆ ಕೈಗೊಂಡು 2020-21ನೇ ಸಾಲಿನ Opening New Colleges, Extension of existing affiliation, continuation of affiliation, Permanent Affiliation, Change/Addition of subject, Division of Faculty, Increase in intake, Change of name, Closure & Withdrawal of a College, Local Inquiry Committee formation and Transfer of Management ಮುಂತಾದ ಸಂಯೋಜನಾ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ನೀಡುವಾಗ ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ.) ಮುಖಾಂತರ ಉನ್ನತೀಕರಿಸಿರುವ ಆನ್-ಲೈನ್ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳಲ್ಲಿ ಅಳವಡಿಸಿರುವ ಮಾಹಿತಿಗಳನ್ನು ವಿಶ್ವವಿದ್ಯಾಲಯವು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ, ಶಿಫಾರಸ್ಸನ್ನು ಆನ್-ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ.

ಆದಕಾರಣ, 2020-21ನೇ ಸಾಲಿನ ವಿ.ವಿ. ಅಧಿಸೂಚನೆ ದಿನಾಂಕ:16-09-2019ರಂತೆ, ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿದಂತಹ ಎಲ್ಲಾ ಕಾಲೇಜುಗಳು ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ.) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿರುವ ಆನ್-ಲೈನ್ ತಂತ್ರಾಂಶದೊಂದಿಗೆ ಆನ್-ಲೈನ್‌ನಲ್ಲಿ https://www.onlineaffiliation.karnataka.gov.in/login.aspxರ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು, ಅಂತಹ ಕಾಲೇಜುಗಳಿಗೆ Login ID & Password ಗಳನ್ನು ತಂತ್ರಾಂಶದ ಸಹಾಯದಿಂದ ನೀಡಲಾಗುವುದು. Login ID & Password ಗಳನ್ನು ಪಡೆದುಕೊಂಡ ಕಾಲೇಜುಗಳು ಅರ್ಜಿಗಳನ್ನು ಭರ್ತಿ ಮಾಡಿ ಅದರ ಆರು ಪ್ರತಿಯನ್ನು ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

| | |
|---|---|
| ಆನ್-ಲೈನ್ ನಲ್ಲಿ Request ಕಳುಹಿಸಿ Login ID & Password ಗಳನ್ನು ಪಡೆದುಕೊಳ್ಳಲು ಈ ದಿನಾಂಕ ನಿಗದಿಪಡಿಸಲಾಗಿದೆ. | 14-07-2020 ರಿಂದ 24-07-2020 |
| ಆನ್-ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಈ ದಿನಾಂಕ ನಿಗದಿಪಡಿಸಲಾಗಿದೆ. | 14-07-2020 ರಿಂದ 05-08-2020 |

ಮುಂದುವರೆದು, 2020-21ನೇ ಸಾಲಿನ ವಿ.ವಿ. ಅಧಿಸೂಚನೆ ದಿನಾಂಕ:16-09-2019ರಂತೆ ಈಗಾಗಲೇ ಅರ್ಜಿ ಸಲ್ಲಿಸಿರುವ ಕಾಲೇಜುಗಳು ಹೆಚ್ಚುವರಿ ಕೋರ್ಸು ವಿದ್ಯಾರ್ಥಿ ಪ್ರಮಾಣಗಳಂತಹ ಹೆಚ್ಚುವರಿ ಸಂಯೋಜನೆ ಅವಶ್ಯಕವಿದ್ದಲ್ಲಿ, ಆನ್-ಲೈನ್ ಮುಖಾಂತರವೇ ಅರ್ಜಿ ಸಲ್ಲಿಸತಕ್ಕದ್ದು, ಈ ಹೆಚ್ಚುವರಿ ಸಂಯೋಜನೆ ಬಗ್ಗೆ ವಿಶ್ವವಿದ್ಯಾಲಯಕ್ಕೆ ತಿಳಿಸಿ, ಅದಕ್ಕೆ ಅನ್ವಯವಾಗುವ ಸಂಯೋಜನಾ ಶುಲ್ಕ ಹಾಗೂ ರೂ.2,000/-ಗಳ ದಂಡ ಶುಲ್ಕದೊಂದಿಗೆ ಮೇಲ್ಕಾಣಿಸಿದ ನಿಗದಿತ ದಿನಾಂಕದ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಪಾವತಿಸತಕ್ಕದ್ದು ಹಾಗೂ ರಸೀದಿಯನ್ನು ಅರ್ಜಿಯೊಂದಿಗೆ ತಪ್ಪದೇ ಲಗತ್ತಿಸತಕ್ಕದ್ದು.

ಕಾಲೇಜುಗಳು ಮೇಲ್ಕಾಣಿಸಿದ ದಿನಾಂಕದ ಒಳಗಾಗಿ ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ತಮ್ಮ ಕಾಲೇಜಿನ ಸಂಯೋಜನೆಗೆ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

K. Jyothi 14/7/2020
ಕುಲಸಚಿವರು

ಗೆ,

1. ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. 2020-21ನೇ ಸಾಲಿಗೆ ಹೊಸ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಸಂಸ್ಥೆಗಳ ಅಧ್ಯಕ್ಷರುಗಳಿಗೆ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-01.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು-01
3. ಕಾರ್ಯಕಾರಿ ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಪಿ.ಕೆ. ಬ್ಲಾಕ್, ಬೆಂಗಳೂರು-09.
4. ವಿತ್ತಾಧಿಕಾರಿಯವರು, ಬೆಂ.ವಿ.ವಿ, ಬೆಂಗಳೂರು.
5. ಸಿಸ್ಟಮ್ ಅನಲಿಸ್ಟ್,ಬೆಂ.ವಿ.ವಿ, ಬೆಂಗಳೂರು.
6. ಕುಲಪತಿಯವರು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)-ಇವರುಗಳ ಮಾಹಿತಿಗಾಗಿ